

ಮಾಂತ್ರಿಕ ವಾಸ್ತವ ಕಥೆ

ನಾಯಿ ಮಲಗಿತ್ತು.

ಎಬ್ಬಿಸಬೇಕೆಂದು ನನಗನಿಸಲಿಲ್ಲ. ಯಾಕೆಂದರೆ ಅದು ನನ್ನ ನಾಯಿ ಅಲ್ಲ.

ಹೀಗೆ ಹಾದಿಬೀದಿಯಲ್ಲಿ ಬಿದ್ದುಕೊಂಡಿರುವ, ಗುರುತು ಪರಿಚಯವಿಲ್ಲದ ನಾಯಿಗಳನ್ನು ಎಬ್ಬಿಸುವುದನ್ನು, ಅಷ್ಟೇಕೆ ಎದುರಾದ ನಾಯಿಗಳೆಲ್ಲವುಗಳತ್ತ ನೇರವಾಗಿ ನೋಡುವುದನ್ನೂ ನಾನು ಅಭ್ಯಾಸ ಮಾಡಿಕೊಂಡಿಲ್ಲ. ಆ ಅಭ್ಯಾಸ ಒಳ್ಳೆಯದಲ್ಲ ಎಂದು ಎಳೆಯ ವಯಸ್ಸಿನಲ್ಲೇ ಅಪ್ಪ ನನಗೆ ಬುದ್ಧಿಮಾತು ಹೇಳಿಕೊಟ್ಟಿದ್ದ. ಹಾಗೆ ಮಾಡುವುದು ಅನಗತ್ಯವಷ್ಟೇ ಅಲ್ಲ, ಅಪಾಯವನ್ನು ಮೈ ಮೇಲೆ ಎಳೆದುಕೊಂಡಂತೆ ಸಹ ಎಂದೂ ಹೇಳಿದ್ದ.

ಹೀಗಾಗಿ ಈ ನಾಯಿಯನ್ನು ನಾನು ಎಬ್ಬಿಸದೇ, ಅದಕ್ಕೆ ಎಚ್ಚರವಾಗುವಂಥದ್ದೇನೂ ನನ್ನಿಂದಾಗದಂತೆ ಎಚ್ಚರಿಕೆ ವಹಿಸಿ ಮುಂದೆ ನಡೆದೆ. ನಾಲ್ಕು ಹೆಜ್ಜೆಗಳಲ್ಲಿ ನಾನದನ್ನು ಮರೆತೂಬಿಟ್ಟೆ. ನನಗೆ ನನ್ನ ಚಿಂತೆಯೇ ದೊಡ್ಡದಾಗಿತ್ತು. ನಿನ್ನೆ ಸಂಜೆಯಿಂದಲೂ ಮನಸ್ಸಿಡೀ ಹೆಬ್ಬಂಡೆಯಂತೆ ಹೇರಿ ಕೂತಿದ್ದ ಅದರ ಭಾರ ಗಳಿಗೆಗಳಿಗೆಗೂ ಏರುತ್ತಲೇ ಇತ್ತು. ಅದರೊಂದಿಗೆ ಈ ನಾಯಿಯದೂ ಸೇರಿಕೊಂಡರೆ ನನ್ನದು ನಾಯಿಪಾಡೇ ಸರಿ.

ಆದರೆ ನಾಯಿಗೆ ಎಚ್ಚರವಾಗಿತ್ತು. ಅಷ್ಟೇ ಅಲ್ಲ, ಅದು ನನ್ನ ಹಿಂದೆ ಬರತೊಡಗಿತ್ತು! ಏನಾಗಬಾರದು ಅಂದುಕೊಂಡೆನೋ ಅದೇ ಆಯಿತಲ್ಲ! ಇತ್ತೀಚೆಗಂತೂ ಬದುಕಿನಲ್ಲಿ ಹಾಗೇ ಆಗುತ್ತಿದೆಯಲ್ಲ!

ತಲೆ ಕೊಡವಿ ಮುಂದೆ ನಡೆದೆ, ಬೆನ್ನ ಹಿಂದಿನ ನಾಯಿನಡಿಗೆಯ ಸಪ್ಪಳಕ್ಕೆ ಬೇಸರಿಸುತ್ತಾ, ಬೇಡದ ಸಹಪಯಣಿಗನನ್ನು ಶಪಿಸುತ್ತಾ. ಆ ಹಾಳು ನಾಯಿಯಂತೂ ಬೊಗಳದೇ, ಒಂಚೂರಾದರೂ ಗುರುಗುಟ್ಟದೇ ಹಿಂದೆಹಿಂದೆ ಬರುತ್ತಲೇ ಇದೆ. ನನಗೆ ತುಸು ಭಯವೆನಿಸಿತು. ಬೊಗಳುವ ನಾಯಿ ಕಚ್ಚುವುದಿಲ್ಲ, ಕಚ್ಚುವ ನಾಯಿ ಬೊಗಳುವುದಿಲ್ಲ ಎಂದು ಒಂದನೆಯ ತರಗತಿಯಲ್ಲಿ ಪಾಪಮ್ಮ ಟೀಚರ್ ಹೇಳಿದು ನನಗೆ ನೆನಪಾಗಿಬಿಟ್ಟಿತ್ತು.

ಓಡಿದರೆ ನಾಯಿಗಳು ಅಟ್ಟಿಸಿಕೊಂಡು ಬರುತ್ತವೆ ಎನ್ನುವುದು ನಾನೇ ಅನುಭವದಿಂದ ಕಂಡುಕೊಂಡಿದ್ದ ಬದುಕಿನ ಸತ್ಯ. ಬಂದು ಕಚ್ಚೇಬಿಡುತ್ತವೆ ಎನ್ನುವುದು ಇತರರನ್ನು ನೋಡಿ ಕಲಿತಿದ್ದ ಬದುಕಿನ ಪಾಠ. ಹೀಗಾಗಿ ಈಗ ಓಡಬಾರದೆಂದು ನಿರ್ಧರಿಸಿದೆ. ಅದೇ ಗತಿಯಲ್ಲಿ ನಡೆಯುತ್ತಾ ಹೋದೆ. ಹಿಂದೆ ಹೆಜ್ಜೆ ಸಪ್ಪಳ ನಿಲ್ಲುತ್ತದೆಯೇ ಎಂದು ಕಾದೆ. ಉಹ್ಞುಂ, ಅದು ನಿಲ್ಲಲಿಲ್ಲ.

ಅದು ನನ್ನ ನಾಯಿ ಎಂದು ಯಾರಾದರೂ ತಿಳಿದುಕೊಳ್ಳಬಹುದು ಎಂದೆನಿಸಿ ಬದುಕಿನಲ್ಲೆಂದೂ ನಾಯಿ ಸಾಕದ ನನಗೆ ಒಂದು ಬಗೆಯ ಬೇಸರವೂ ಆಗತೊಡಗಿತು. ಓಡಿಸಬೇಕೆನಿಸಿ ನಿಂತೆ.

ಅದೂ ನಿಂತಿತು. ನನ್ನನ್ನೇ ನೋಡಿತು. ತಲೆ ಕುಣಿಸಿ ಬಾಲ ಅಲ್ಲಾಡಿಸಿತು.

ಅದು ಬೆಳ್ಳಗಿತ್ತು, ಯಾರೋ ಸ್ನಾನ ಮಾಡಿಸಿದ್ದಂತೆ ಶುಭ್ರವಾಗಿತ್ತು. ಬೀದಿನಾಯಿಯಂತೆ ಬಡಕಲಾಗಿರದೇ ಹೊತ್ತಿಗೆ ಸರಿಯಾಗಿ ಅನ್ನ ಹಾಕಿ ಸಾಕಿದ ನಾಯಿಯಂತೆ ಗುಂಡುಗುಂಡಗಿತ್ತು. ಇಷ್ಟು ದೂರ ಬೊಗಳದೇ ಬಂದಿದ್ದರೂ ಹತ್ತಿರ ಬಂದು ಮೀನಖಂಡಕ್ಕೆ ಬಾಯಿ ಹಾಕುವ ಪ್ರಯತ್ನವನ್ನೇನೂ ಮಾಡಿರದ, ಕಣ್ಣುಗಳಲ್ಲಿ ಕ್ರೌರ್ಯ ತೋರದ, ಕುಡುಗೋಲಿನಂತೆ ಮೇಲೆದ್ದ ಬಾಲವನ್ನು ಅಲ್ಲಾಡಿಸಿಕೊಂಡು ಸ್ನೇಹ ತೋರುವ ಅದು ಯಾರೋ ಸಂಸ್ಕಾರವಂತ ಮನೆತನದವರು ವರ್ಷಗಳ ಕಾಲ ಸಾಕಿದ್ದೇ ಇರಬೇಕು.

ನನ್ನದಲ್ಲದ, ಗುರುತು ಪರಿಚಯವಿಲ್ಲದ ಒಂದು ನಾಯಿಯ ಮೇಲೆ ನನಗೆ ಮೊಟ್ಟಮೊದಲ ಬಾರಿಗೆ ನಂಬಿಕೆ ಬಂತು. ನನ್ನ ಪಾಡಿಗೆ ನಾನು ನನ್ನ ಚಿಂತೆಯೊಂದಿಗೆ ಬೆಳಗಿನ ವಾಕಿಂಗ್ ಮಾಡಿ ಮುಗಿಸಬಹುದು ಅನಿಸಿತು. ರಾತ್ರಿಯಿಡೀ ನಿದ್ದೆಗೆಟ್ಟ ನನಗೆ ಈ ವಾಕಿಂಗ್ ಬಲು ಮುಖ್ಯ. ಇಲ್ಲದಿದ್ದರೆ ಈ ದಿನ ನನ್ನದಾಗದು, ಕೌಂಟರ್‌ನಲ್ಲಿ ಕೂತು ಸರಿಯಾಗಿ ಟಿಕೆಟ್ ಹೊಡೆಯಲಾಗದು. ಪ್ರಯಾಣಿಕರನ್ನು ಅವರಲ್ಲದ ಗುರಿಗೆ ಕಳುಹಿಸಹೊರಟರೆ ಸರ್ಕಾರ ನನ್ನನ್ನೆಲ್ಲಿಗೆ ಕಳುಹಿಸುತ್ತದೋ. ತಲೆಯ ಮೇಲೇ ಕೂತಿರುವ ಹೆಂಗಸು ತೊಟ್ಟಿಲು ತೂಗುವ ಕೈ ತಲೆಯನ್ನೂ ತೆಗೆಯಬಲ್ಲುದು ಎಂದೆನ್ನುತ್ತಿದ್ದಳು ಅಂತ ಸುದ್ದಿ ಬೇರೆ ಇದೆ.

ಹೆಂಗಸು!

ಬದುಕಿನಲ್ಲಿ ಎಲ್ಲೆಲ್ಲೂ ಹೆಣ್ಣೇ ಎದುರಾಗಬೇಕೇ? ನಾಯಿಯಿಂದಾಗಿ ತುಸು ಪಕ್ಕಕ್ಕೆ ಸರಿದಿದ್ದ ಹೆಣ್ಣು ಮತ್ತೆ ಮಸ್ತಿಷ್ಕದ ಮಧ್ಯಕ್ಕೆ ಬಂದು ಹತ್ತೂ ಉಗುರುಗಳಿಂದ ಸುತ್ತಲೂ ಬಗೆಯತೊಡಗಿತು. ತಲೆ ಒದರುತ್ತಾ ತಪ್ಪರಗಾಲು ಹಾಕಿದೆ. ಯಾರೋ ಹಿಡಿದು ನಿಲ್ಲಿಸಿದರು. 'ಕಂಗ್ರಾಜ್ಯುಲೇಷನ್ಸ್!' ಅಂದರು. ಅದೂ ಹೆಣ್ಣು ದನಿ. ಗುರುತು ಪರಿಚಯ ಇಲ್ಲದ್ದು. ಗಕ್ಕನೆ ನಿಂತೆ.

ನನ್ನಷ್ಟೇ ಎತ್ತರದ ವ್ಯಕ್ತಿ. ಆದರೆ ಹೆಣ್ಣು. ಕೈ ಹಿಡಿದಳು. ಬಿಡಿಸಿಕೊಳ್ಳಲು ಹೋದೆ. ಬಿಡದೇ, 'ಏನಿಷ್ಟು ಚಿಂತೆ? ಆಕಾಶ ಇನ್ನೂ ಮೇಲೇ ಅಷ್ಟೆತ್ತರದಲ್ಲೇ ಇದೆಯಲ್ಲ?' ಅಂದಳು. ನನಗೆ ರೇಗಿಹೋಯಿತು. 'ನೀವು ಬಯಸ್ತಾ ಇರೋ ನಿಮ್ಮಂಥದ್ದೇ ಗಂಡುಮಗುವನ್ನ ಹೆತ್ತು ಕೈಗಿಡ್ತೀನಿ ಅಂತ ಹೇಳುತ್ತಾ ತಿಂಗಳ ಹಿಂದೆ ತವರಿಗೆ ಹೋದ ಹೆಂಡತಿ ಹೆತ್ತದ್ದು ಅವಳಂಥದೇ ಹೆಣ್ಣಂತೆ!' ಎಂದು ಗೊಣಗಿದೆ. 'ಓ!' ಅಂದಳು ಅವಳು ಅಸಡ್ಡೆಯಲ್ಲಿ. 'ಅದು ನನಗೆ ಗೊತ್ತು. ಅದಕ್ಕೇ ಅಲ್ಲವಾ ನಾನು ಕಂಗ್ರಾಜ್ಯುಲೇಷನ್ಸ್ ಹೇಳಿದ್ದು' ಎನ್ನುತ್ತಾ ಕೈ ಒತ್ತಿ ನಕ್ಕಳು. ನನಗೆ ಪಿತ್ಥ ನೆತ್ತಿಗೇರಿತು. 'ಒಡಹುಟ್ಟಿದ್ದೊಂದು ಹೆಣ್ಣು. ಈಗ ಆಫೀಸ್‌ನಲ್ಲಿ ತಲೆಯ ಮೇಲೆ ಕೂತಿರುವುದು ಹೆಣ್ಣು. ಅವಳಿಗೆ ಅಭಯಹಸ್ತವಾಗಿ ರಾಜಧಾನಿಯಲ್ಲಿ ಕೂತಿರುವ ಮಿನಿಷ್ಟರ್ರೂ ಹೆಣ್ಣೇ. ಈಗ ನೋಡಿದರೆ ಹೆಂಡತಿ ಹೆತ್ತದ್ದೂ ಹೆಣ್ಣೇ!' ಎಂದು ಕೂಗಿದೆ. 'ಬರೀ ಹೆಣ್ಣಿನ ಮುಖವನ್ನೇ ನೋಡುವ ಈ ಪಡಿಪಾಟಲು ತಪ್ಪುವುದು ಯಾವಾಗ ಅನ್ನೋ ಚಿಂತೇಲಿ ನಾ ಕೊರಗ್ತಿದ್ರೆ ನನ್ನ ಕಷ್ಟ ಕೇಳೋಕೆ ಬಂದ ನೀನೂ ಹೆಣ್ಣೇ! ಇದೇನು ಹಣೆಬರಹ?' ಎಂದು ಹೇಳಲು ಹೋದೆ. ಆದರೆ ಅಷ್ಟರಲ್ಲಾಗಲೇ ಅವಳು ಗಕಗಕ ನಕ್ಕುಬಿಟ್ಟಳು. ನಗುತ್ತಲೇ ಕೇಳಿದಳು: 'ಅಷ್ಟಕ್ಕೇ ಯಾಕೆ ನಿಲ್ಲಿಸಿಬಿಟ್ಟೆ? ಮೊದಲಿಗೆ ನಿನ್ನನ್ನು ಹೆತ್ತವಳೇ ಹೆಣ್ಣು. ಹ್ಞುಂ, ನಿನಗೆಲ್ಲಿ ನೆನಪಿದೆ ಹೇಳು? ನೀನೇನೂ ಕಾಣಲಿಲ್ಲವಲ್ಲ ಅದನ್ನು. ಆದರೆ ಆಮೇಲಿನದಾದರೂ ನೆನಪಿದೆ ತಾನೆ? ಅಥವಾ ನಾನು ನೆನಪಿಸಲಾ? ಶಾಲೆಯಲ್ಲಿ ನೀನು ಸ್ನೇಹಕ್ಕೆ ಬಯಸಿದ್ದು ಹೆಣ್ಣನ್ನು, ಬಸ್ಸಿನಲ್ಲಿ ಪಕ್ಕ ಕೂರಲೆಂದು ಆಶಿಸಿದ್ದು ಹೆಣ್ಣನ್ನು, ರೈಲಿನ ಎದುರು ಬರ್ತ್‌ನಲ್ಲಿ ಮಲಗಿರಲೆಂದು ಕನಸಿದ್ದು ಹೆಣ್ಣನ್ನು, ಹರಯ ಏರಿದಾಗ ಸಾಂಗತ್ಯಕ್ಕೆ ಹುಡುಕಹೋದದ್ದು ಹೆಣ್ಣನ್ನು, ತಾಳಿ ಕಟ್ಟಿ ಸತಿಯಾಗಿಸಿಕೊಂಡದ್ದು ಹೆಣ್ಣನ್ನು, ಆಸೆ ಪೂರೈಸೇ ಎಂದು ಅಪ್ಪಿದ್ದು ಹೆಣ್ಣನ್ನು, ಹಾಸಿಗೆಗೆ ಎಳೆದುಕೊಂಡದ್ದು ಹೆಣ್ಣನ್ನು, ಸೀಮಂತ ಮಾಡಿ ತವರಿಗೆ ಕಳಿಸಿದ್ದು ಹೆಣ್ಣನ್ನು. ಈಗ ಮಾತ್ರ ಹೆಣ್ಣು ಬೇಡವಾ? ಅಪ್ಪಿಕೊಳ್ಳಲು ಮಾತ್ರ ಹೆಣ್ಣು ಬೇಕಾ? ಎತ್ತಿಕೊಳ್ಳಲು ಬೇಡವಾ? ಬಟ್ಟೆ ಬಿಚ್ಚಲು ಮಾತ್ರ ಹೆಣ್ಣಿದ್ದರೆ ಸಾಕೇ? ಬಣ್ಣದ ಅಂಗಿ ತೊಡಿಸಿ ಅಲಂಕರಿಸಲು ಹೆಣ್ಣು ಬೇಡವೇನು? ತಟ್ಟೆಗೆ ಅನ್ನ ಇಕ್ಕಲು ಮಾತ್ರ ಹೆಣ್ಣಿರಬೇಕೇ? ಕೈತುತ್ತು ತಿನ್ನಿಸಲು ಹೆಣ್ಣಿರಬಾರದೇನು? ಹೆಣ್ಣಿಗೆ ದೊಡ್ಡದಾಗಿ ಅರುಂಧತಿ ನಕ್ಷತ್ರ